**ಸರ್ವ ಶಿಕ್ಷಣ ಅಭಿಯಾನ ಸಮಿತಿ – ಕರ್ನಾಟಕ**

ರಾಜ್ಯ ಯೋಜನಾ ನಿರ್ದೇಶಕರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 01

ಸಂ. ಸಶಿಅ/ಸಿ.ಎ.ಎಲ್.ಸಿ–ನಿರ್ವಹಣೆ/2007–08 ದಿ.24.10.2008

**<u>ಸುತ್ತೋಲೆ</u>**

ವಿಷಯ: 2004–05ನೇ ಸಾಲಿನಲ್ಲಿ ಅನುದಾನದಡಿಯಲ್ಲಿ ಸರಬರಾಜು ಮಾಡಲಾದ ಕಂಪ್ಯೂಟರ್‌ಗಳ ರಿಪೇರಿ ಹಾಗೂ ನಿರ್ವಹಣೆ ಕುರಿತು.

***

2004–05ನೇ ಸಾಲಿನಲ್ಲಿ ಆಯ್ದ ಶಾಲೆಗಳಿಗೆ ಸಿ.ಎ.ಎಲ್.ಸಿ ಕಾರ್ಯಕ್ರಮದಡಿಯಲ್ಲಿ ಕಂಪ್ಯೂಟರ್‌ಗಳನ್ನು ಒದಗಿಸಲಾಗಿತ್ತು ಇವುಗಳ ನಿರ್ವಹಣೆಯನ್ನು ಕೈಗೊಳ್ಳುವ ಅಗತ್ಯವಿದೆ. ಸಂಬಂಧಿಸಿದ ಶಾಲೆಗಳ ಜಿಲ್ಲಾವಾರು ಪಟ್ಟಿಯನ್ನು ಇದರೊಂದಿಗೆ (ಅಡಕ–1ರಲ್ಲಿ) ಲಗತ್ತಿಸಿದೆ. ಈ ಶಾಲೆಗಳ ಕಂಪ್ಯೂಟರ್ ಹಾಗೂ ಯು.ಪಿ.ಎಸ್ ನಿರ್ವಹಣೆ ಕುರಿತಂತೆ ಸಂಸ್ಥೆಯನ್ನು ಜಿಲ್ಲಾ ಹಂತದಲ್ಲಿ ಗುರುತಿಸಬೇಕಾಗಿದೆ.

ಜಿಲ್ಲಾ ಹಂತದಲ್ಲಿ 2004–05ನೇ ಸಾಲಿನಲ್ಲಿ ಸರಬರಾಜು ಮಾಡಲಾದ ಕಂಪ್ಯೂಟರ್‌ಗಳ ರಿಪೇರಿ ಹಾಗೂ ನಿರ್ವಹಣೆಗೆ ಸಂಸ್ಥೆಯನ್ನು ಟೆಂಡರ್ ಮೂಲಕ ನಿಯಮಾನುಸಾರ ಗುರುತಿಸುವುದು. ಕನಿಷ್ಠ 3 ವರ್ಷಗಳಿಗೆ ನಿರ್ವಹಣೆಗೆ ಅವಕಾಶ ಮಾಡುವುದು. ನಿರ್ವಹಣೆಗೆ ಸಂಬಂಧಿಸಿದಂತೆ ತ್ರೈಮಾಸಿಕ ಪಾವತಿಗಳನ್ನು ಮಾಡಲು ಅವಕಾಶ ಮಾಡಿಕೊಳ್ಳುವುದು ಹಾಗೂ ರಿಪೇರಿ ಮತ್ತು ನಿರ್ವಹಣೆಯನ್ನು ಮಾಡಿರುವುದನ್ನು ಖಚಿತ ಪಡಿಸಿಕೊಂಡ ನಂತರ ಪಾವತಿಗಳನ್ನು ಮಾಡುವುದು. ಸರ್ವ ಶಿಕ್ಷಣ ಅಭಿಯಾನದ ಆರ್ಥಿಕ ನಿರ್ವಹಣೆ ಮತ್ತು ಸಂಗ್ರಹಣಾ ಕೈಪಿಡಿಯಲ್ಲಿನ ನಿಯಮಗಳ ಅನುಸಾರ ಈ ಎಲ್ಲಾ ಕ್ರಮ ಕೈಗೊಳ್ಳಲು ಸೂಚಿಸಿದೆ.

ಈ ಕಾರ್ಯಕ್ಕಾಗಿ ಅಗತ್ಯ ಅನುದಾನವನ್ನು 2008–09ನೇ ಸಾಲಿನ ಸಿ.ಎ.ಎಲ್.ಸಿ ಕಾರ್ಯಕ್ರಮದಡಿಯಲ್ಲಿ ಭರಿಸಬೇಕಾಗಿದೆ. ಆದುದರಿಂದ ಜಿಲ್ಲೆಗಳಲ್ಲಿ ಟೆಂಡರ್ ಪ್ರಕ್ರಿಯೆ ವೆಚ್ಚ ಹಾಗೂ 2008–09ನೇ ಸಾಲಿನ ನಿರ್ವಹಣಾ ವೆಚ್ಚವನ್ನು ಲೆಕ್ಕಾಚಾರ ಮಾಡಿ ರಾಜ್ಯ ಕಛೇರಿಗೆ ತಿಳಿಸಬೇಕು. ಅಲ್ಲದೆ ಟೆಂಡರ್ ಪ್ರಕಾರ ಆಯ್ಕೆಯಾದ ಸಂಸ್ಥೆಗೆ 2009–10 ಮತ್ತು 2010–11ನೇ ಸಾಲಿಗೆ ಪಾವತಿಸಬೇಕಾದ ಮೊತ್ತದ ವಿವರವನ್ನು ರಾಜ್ಯ ಕಛೇರಿಗೆ ವರದಿ ಮಾಡಲು ಸೂಚಿಸಿದೆ.

ರಾಜ್ಯ ಹಂತದಲ್ಲಿ 2004–05ನೇ ಸಾಲಿನಲ್ಲಿ ಸರಬರಾಜು ಮಾಡಲಾದ ಕಂಪ್ಯೂಟರ್ ಹಾಗೂ ಯು.ಪಿ.ಎಸ್ ಗಳ ಸ್ಥಿತಿಗತಿಯನ್ನು ಕಿಯೋನಿಕ್ಸ್ ಸಂಸ್ಥೆಯ ವತಿಯಿಂದ ಪರಿಶೀಲಿಸಲಾಗಿದ್ದು, ಇವುಗಳ ವರದಿಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಸದರಿ ಸಂಸ್ಥೆಯು ಸಲ್ಲಿಸಿರುವ ದುರಸ್ತಿಗಾಗಿ ಜಿಲ್ಲಾವಾರು ವೆಚ್ಚವಾಗಬಹುದಾದ ಅಂದಾಜು ವಿವರಗಳನ್ನು ಮಾಹಿತಿಗಾಗಿ ಇದರೊಂದಿಗೆ ಲಗತ್ತಿಸಿದೆ (ಅಡಕ–2).

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ

ಪ್ರತಿಯನ್ನು,

1. ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಇವರಿಗೆ ಸೂಕ್ತ ಕ್ರಮಕ್ಕಾಗಿ.
2. ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾರಿಗಳು, ಸ.ಶಿ.ಅ, ಇವರಿಗೆ ಸೂಕ್ತ ಕ್ರಮಕ್ಕಾಗಿ.
3. ಈ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ ಮಾಹಿತಿಗಾಗಿ.
4. ಕಛೇರಿ ಪ್ರತಿ.